# “ಶ್ರೀ ವಿಜಯದಾಸವರ್ಯರ ಚರಮ ಶ್ಲೋಕ”

ಶ್ರೀ ಪಿ.ಬಿ.ಎನ್. ಆಚಾರ್ಯ ರಾಯಚೂರು

ಅಜ್ಞಾನ ತಿಮಿರಚ್ಛೇದಂ ಬುದ್ಧಿಸಂಪತ್ಪ್ರದಾಯಕಂ।
ವಿಜ್ಞಾನ ವಿಮಲಂ ಶಾಂತಂ ವಿಜಯಾಖ್ಯ ಗುರುಂ ಭಜೇ॥

Contributed by Koushalya & Sudha

ಯಾವ ಸರ್ವೋತ್ತಮನಾದ, ಸ್ವಾಮಿಯಾದ, ಸರ್ವತಂತ್ರ ಸ್ವತಂತ್ರನಾದ ಜಗದೇಕ ಕಾರಣನಾದ ಭಗವಂತನ ಅತ್ಯಂತ ಕರುಣೆಗೆ, ಪ್ರೀತಿಗೆ ಪಾತ್ರರಾದ, ಗುರುಗಳಾದ, ಅಪರೋಕ್ಷ ಜ್ಞಾನವರೇಣ್ಯರಾದ, ಶ್ರೀ ವಿಜಯದಾಸರನ್ನು ಭಜಿಸುವುದರಿಂದ ಪರಮಾತ್ಮನ ಮಹಿಮೆ, ಹಿರಿಮೆ, ಗರಿಮೆ, ತಿಳಿಯಲಶಕ್ಯವಾದ ಅಜ್ಞಾನವೆಂಬ ಕತ್ತಲೆಯನ್ನು ಕಳೆದು, ಸುಜ್ಞಾನವೆಂಬ (ಬೆಳಕೋಪಾದಿಯಲ್ಲಿರುವ) ಬುದ್ಧಿ, ಸಂಪತ್ತು, ವಿಶೇಶ ಜ್ಞಾನ(ವಿಜ್ಞಾನ)ವಿಷ್ಣುವಿನ ಬಗ್ಗೆ, ಮಲರಹಿತವಾದ, ಲೌಕಿಕ(ಅಪೇಕ್ಷರಹಿತವಾದ) ಶುದ್ಧಭಕ್ತಿಯನ್ನು ಹಾಗೂ ಶಾಂತಿಯನ್ನು (ಮಾನಸಿಕ ಹಾಗೂ ದೈಹಿಕ ಸ್ಥಿರ ಹಾಗೂ ಸಧೃಢ) ಹೊಂದಲು ಕಾರಣೀಭೂತವಾದ ಮೇಲಿನ ಚರಮ ಶ್ಲೋಕ ಪಂಡಿತ ಪಾಮರರಿಗೂ ಕಾಮಧೇನು ಕಲ್ಪವೃಕ್ಷದಂತಿದೆನ್ನುವುದಕ್ಕೆ ಯಾವ ಅನುಮಾನ ಸಂಶಯವೂ ಇಲ್ಲವೆಂಬುದಾಗಿ ಸ್ಥೈರ್ಯ, ಧೈರ್ಯದಿಂದ ಹೇಳಬಹುದಾಗಿದೆ.

(೧) ಮೋಕ್ಷವೆಂಬುದು ದ್ವಿದಳಾತ್ಮಕವಾದದ್ದು. ಅಂದರೆ ಅನಿಷ್ಟ ನಿವಾರಣತ್ವೇನ ಇಷ್ಟಪ್ರಾಪ್ತಿ. ಪರಮಾತ್ಮನ ಬಗ್ಗೆ ಇರುವ ಅಜ್ಞಾನವೆಂಬ ಕತ್ತಲೆಯನ್ನು ಕಳೆದುಕೊಂಡು ಸೃಷ್ಟಿ, ಸ್ಥಿತಿ, ಲಯ, ನೇಮನ ಜ್ಞಾನ, ಅಜ್ಞಾನ, ಬಂಧಕ ಮೋಚಕವೆಂಬ ಅಷ್ಟೈಶ್ವರ್ಯ ಸಂಪನ್ನನಾದ ಸ್ವಾಮಿಯ, ಸ್ವಾಮಿತ್ವ, ಒಡೆತನತ್ವ ಈಶತ್ವ ಜೊತೆಗೆ ಜೀವಿಯ ಭೃತ್ಯತ್ವ, ಸೇವಕತ್ವ, ದಾಸ್ಯತ್ವವನ್ನು ಸಮೀಚೀನವಾಗಿ ತಿಳಿದುಕೊಂಡು ಪರಮಾತ್ಮನ ಅತ್ಯಧಿಕ ಪ್ರಸಾದರೂಪವಾದ ಕೈವಲ್ಯವೆಂಬ ಬಿಡುಗಡೆಯನ್ನು ಹೊಂದುವುದೇ ಜೀವಿಯ ಜೀವನದ ಮುಖ್ಯೋದ್ದೇಶ ಹಾಗೂ ಗುರಿಯಾಗಿರುತ್ತದೆ.

(೨) ಬದ್ಧಿಸಂಪತ್ಪ್ರದಾಯಕಮ್ಃ ಅಂದರೆ ಸದ್ಬುದ್ಧಿ "ಸದಾಗಮ್ಯೈಕ್ಯೈ ವೇದ್ಯ" ಸನ್ಮಾರ್ಗವಾದ, ಯಥಾರ್ಥವಾದ, ನಿತ್ಯವೂ ಸತ್ಯವೂ ಅನಾದಿಯೂ ಆದ ಚತುರ್ವೇದಗಳಲ್ಲಿ ಪ್ರತಿಪಾದ್ಯನಾದ ಪರಮಾತ್ಮನ ಗುಣ ಪರಿಪೂರ್ಣತ್ವ, ದೋಷದೂರತ್ವ, ಜ್ಞಾನ ಗಮ್ಯತ್ವ, ಮೋಕ್ಷಪ್ರಾಪ್ಯತ್ವಗಳನ್ನು ಯಥಾರ್ಥವಾಗಿ, ಯಥಾಶಕ್ತಿ, ಯಥಾಯೋಗ್ಯತಾನುಸಾರವಾಗಿ ತಿಳಿದುಕೊಳ್ಳುವುದೇ ಸದ್ಬುದ್ಧಿ ಎನಿಸಿಕೊಳ್ಳುತ್ತದೆ. ಹಾಗೂ ಪರಮಾತ್ಮನಲ್ಲಿರುವ ಅಷ್ಟೈಶ್ವರ್ಯಗಳೇ ನಿಜವಾದ ಸಂಪತ್ತು ಹೊರತು ಔಪಚಾರಿಕವಾದ, ಹಾಗೂ ಪ್ರಾಪಂಚಿಕ ಸುಖಭೋಗವಾದ ಧನಕನಕಾದಿಗಳಾದ, ನಶ್ವರವಾದ ಚಂಚಲವಾದ ಸಂಪತ್ತು ಸಂಪತ್ತೇ ಎನಿಸುವುದಿಲ್ಲ.

(೩) ವಿಜ್ಞಾನಂಃ ವಿಷ್ಣುವಿನ ಬಗ್ಗೆ ಯಥಾರ್ಥ ಜ್ಞಾನ ಹೊಂದುವುದು ಹಾಗೂ ಅದರಂತೆ ಉಪಾಸನಗೈಯುವುದು. ಅಂದರೆ 'ನಾರಾಯಣಂ ಗುಣೈಃ, ಸರ್ವೈರುಧೀರ್ಣಂ ದೊಷವರ್ಜಿತಂ, ಜ್ಞೆಯ ಗಂಮ್ಯಂ ಗುರೂಂಶ್ಚಾಪಿನತ್ವಾ ಸೂತ್ರಾರ್ಥಂ ಉಚ್ಯತೇ, "ಓಂ ಓಂ ಅಥಾಥೋ ಬ್ರಹ್ಮಜೀಜ್ಞಾಸ್ಯ ಓಂ" ಹಾಗೂ ಗುಣಪರಿಪೂರ್ಣ, ದೋಷದೂರ, ಜ್ಞಾನದಿಂದ ತಿಳಿಯಲ್ಪಡುವವ ಹಾಗೂ ಮೋಕ್ಷ ಫಲವನ್ನು ನೀಡುವ ಸ್ವಾಮಿಯಾಗಿದ್ದಾನೆಂದು ತಿಳಿಯುವುದು ಹಾಗೂ ದಾಸರ ವಾಣಿಯಂತೆ "ಎಳ್ಳುಮೊನೆಯು ಪೊಳ್ಳು ಬಿಡದೆ ಎಲ್ಲ ಠಾವಿನಲಿ ಸ್ವಾಮಿ ಇದ್ದಾನ್ ಚಿಂತ್ಯಾಕೆ ಮಾಡುತಿದ್ದಿ ಚಿನ್ಮಯನಿದ್ದಾನೆ ಪ್ರಾಣಿ ಚಿಂತ್ಯಾಕೆ ಮಾಡುತಿದ್ದಿ" ಹಾಗೂ "ಆವನಾವನು ಕಾಯ್ವ ಈ ಅವನಿಯೊಳು ದೇವ ದೇವಶ ಶ್ರೀಹರಿಕೃಷ್ಣನಲ್ಲದೇ" "ಅವನೊಬ್ಬನೇ ಅನಿಮಿತ್ತ ಬಂಧು ಹಾಗೂ ಸರ್ವತ್ರ ವ್ಯಾಪ್ತ, ಜಗದೇಕಕಾರಣ, ತ್ರಿಜಗದ್ವಿಲಕ್ಷಣನೆಂದು ತಿಳಿದು ಉಪಸನೆ ಮಾಡುವುದೇ ನಿಜವಾದ ವಿಜ್ಞಾನ ಹೊರತು ಇಹಲೋಕದ, ಪ್ರಾಪಂಚಿಕ ಹಾಗೂ ಹೊಟ್ಟೆಹೊರೆದುಕೊಳ್ಳಲು ಕಾರಣೀಭೂತನಾದ, ಭೌತಿಕ, ರಾಸಾಯನಿಕ, ಜೈವಿಕ ಸಂಶೋಧನಾತ್ಮಕ ಪ್ರಾಪಂಚಿಕ ವಿಷಯ ಸಂಬಂಧದ ಗ್ರಂಥಗಳು ಹಾಗೂ ಪುಸ್ತಕ ಜನನ ಜ್ಞಾನ ವಿಜ್ಞಾನವೆನ್ನಿಸಿಕೊಳ್ಳಲಾರವು.

(೪) ವಿಮಲಂ: ಮಲರಹಿತವಾದ ಭಕ್ತಿ, ಅಂದರೆ ಪ್ರಾಪಂಚಿಕ ವಿಷಯಗಳ ಅಪೇಕ್ಷಿತ ರಹಿತವಾದ ಭಕ್ತಿಯನ್ನು ಪರಮಾತ್ಮನ ಹಾಗೂ ಅವನ ಭಕ್ತರುಗಳಾದ ದೇವತೆಗಳ, ಯತಿಗಳ, ದಾಸರಾಯರುಗಳ ಮಹಿಮೆ, ಹಿರಿಮೆ, ಗರಿಮೆಗಳರಿತು ಅವರ ಚರಣಾರವಿಂದಾಗಳಲ್ಲಿ ಸದೃಢ ಸ್ನೇಹದಿಂದ, ಪ್ರಾರ್ಥಿಸುವುದೇ ಮಲರಹಿತವಾದ ಭಕ್ತಿಎನ್ನಿಸಿಕೊಳ್ಳುತ್ತದೆ ಲೌಕಿಕ ಪ್ರಾಪಚಿಂಕ, ವಿಷಯ ಭೋಗಗಳ, ನಶ್ವರವಾದ, ಆಧ್ಯಾತ್ಮಿಕ ಸಾಧನೆಗೆ ಪ್ರತಿಬಂಧಕವಾದ ಕ್ಷಣಿಕ ದೈಹಿಕ ಸುಖಭೋಗಕ್ಕೆ ಬೇಕಾಗುವ ಐಶ್ವರ್ಯ ಪ್ರಾಪ್ತಿಗಾಗಿ ಮಾಡುವ ಅಪೇಕ್ಷ ಸಹಿತವಾದ ಭಕ್ತಿಯೇ ಮಲಭಕ್ತಿ ಎನಿಸುತ್ತದೆ. ಶುದ್ಧ ಭಕ್ತಿ, ಅಂದರೆ ಅಮಲಾಭಕ್ತಿಶ್ಚ ತತ್ಸಾಧನಂ ಅನ್ನುವ ಭಕ್ತಿಯನ್ನು ಮಾಡಿದವರು ಜಗತ್ತಿನಲ್ಲಿದ್ದಾರೆಯೇ ಎಂಬ ಅನುಮಾನ ಅಥವಾ ಶಂಕೆ ಬಂದರೆ, ವಾಯು ಅವತಾರಭೂತರಾದ ಹನುಮಂತ ದೇವರು, ರಾಮದೇವರ ಸೇವೆಯನ್ನು (ಅಮ್ಮನವರಾದ ಜಗನ್ಮಾತೆಯಾದ ಸೀತಾಮಾತೆಯವರಿಗೆ ಚೂಡಾಮಣಿಯನ್ನು ಕೊಟ್ಟು ಪುನಃ ಅವರಿಂದ ಉಂಗುರ ಮುದ್ರಿಕೆಯನ್ನು ಸ್ವಾಮಿಯಾದ ರಾಮದೇವರಿಗೆ ತಂದೊಪ್ಪಿಸಿದಾಗ) ಗೈದಾಗ ರಾಮದೇವರಲ್ಲಿ ಯಾವ ವರವನ್ನು ಬೇಡದಿರುವಂತ ಹಾಗೂ ತನ್ನ ಅಮೋಘ ಹಾಗೂ ಏಕಾಂತ ನಿಶ್ಚಲ ಭಕ್ತಿಯಿಂದ, ಭಗವಂತನ ನಾಮಸ್ಮರಣೆಯಲ್ಲಿ ಅಚಲ ವಿಶ್ವಾಸ್, ಧೃಡಭಕ್ತಿಯಿಂದ ಶುಕ್ಲಷೋಣಿ ಸಂಬಂಧವಿಲ್ಲದೇ ಜಡಭೂತವಾದ ಸ್ತಂಭದಲ್ಲಿಯೇ ಸ್ವಾಮಿಯಾದ ಶ್ರೀ ನೃಸಿಂಹರೂಪಿ ಪರಮಾತ್ಮನ್ನು ಸಾಕ್ಷಾತ್ಕಾರ ಮಾಡಿಸಿ ತಾವು ಮಾತ್ರ ನೋಡದ್ದಲ್ಲದೇ ಅನೇಕ ಭಕ್ತ ಶಿರೋಮಣಿಗಳಾದ ದೇವತೆಗಳಿಗೆ, ಗಂಧರ್ವ ಕಿನ್ನರ ಮೊದಲಾದ ಅನೇಕ ಸಾಮಾನ್ಯ ದೈವಭಕ್ತರಿಗೆ ದರ್ಶನ ಮಾಡಿಸಿದ, ದೈತ್ಯನಾದ ತಂದೆಯೂ ಆದ, ಮಿಥ್ಯಜ್ಞಾನಿಯೂ ಆದ ದುಷ್ಟನಾದ ಹಿರಣ್ಯಕಶ್ಯಪುವಿನ ಸಂಹಾರವಾದ ನಂತರ ಮಗುವಾದ ಪ್ರಹ್ಲಾದ ರೂಪದಲ್ಲಿರುವ ಭಕ್ತನಿಗೆ ನೃಸಿಂಹರೂಪಿ ಪರಮಾತ್ಮ ವರವನ್ನು ನೀಡುವುದಾಗಿ ಹೇಳುವಾಗ "ನಿನ್ನನ್ನು ಬೇಡದೇ ಇರುವ ಒಂದು ವರವನ್ನು ಕೊಡು" ಎಂಬುದಾಗಿ ಕೇಳಿದ ವಿಮಲಂ ಮಲರಹಿತ ಭಕ್ತಿಯನ್ನು ಮಾಡಿದ ಬಾಲಕನಾದ ಪ್ರಹಲ್ಲಾದರೇ ಅಂತರಂಗ ಭಕ್ತರು ಮತ್ತು ಅಂತರಂಗ ಭಕ್ತರು ಅಪರೋಕ್ಷ ಜ್ಞಾನಿವರೇಣ್ಯರಾದ ಶ್ರೀ ವಿಜಯದಾಸರ ಶಿಷ್ಯರಾದ ಅಪರೋಕ್ಷಜ್ಞಾನಿವರೇಣ್ಯರಾದ ಶ್ರೀ ಗೋಪಾಲದಾಸರು ಗರಗಳ ಒಂದೇ ಮಾತಿಗೆ,

ಹಿಂದು ಮುಂದು ಯೋಚಿಸದೆ ತಮ್ಮ ಅಮೂಲ್ಯವಾದ ೪೨ ವರ್ಷಗಳ ಆಯುಷ್ಯವನ್ನು ಶ್ರೀ ಹರಿಕಥಾಮೃಥಸಾರ ಗ್ರಂಥ ಕರ್ತೃಗಳಾದ ಶ್ರೀ ಜಗನ್ನಾಥದಾಸರದ ಶ್ರೀನಿವಾಸ ಆಚಾರ್ಯರಿಗೆ ಜೋಳದ ರೊಟ್ಟಿಯಲ್ಲಿ ಧನ್ವಂತರಿ ಸ್ತೋತ್ರವನ್ನು ಮಾಡಿ ಆಯುಷ್ಯವನ್ನು ಕೊಟ್ಟು ತ್ಯಾಗಮೂರ್ತಿಯಾದ ಶ್ರೀ ಗೋಪಾಲದಾಸರು ಅವರ ಗುರುಗಳಾದ ಶ್ರೀ ವಿಜಯದಾಸರಲ್ಲಿ ಆಗಲಿ ಸ್ವಾಮಿಯಾದ ಶ್ರೀ ಗೋಪಾಲವಿಠಲನಲ್ಲಿ ಬೇಡಿದ ಯಾವ ವರಗಳಾದರೂ ಇವೆಯೇ?

(ಋ) ಶಾಂತಂ: ಮಾನ್ಯವಂತನೂ, ಬಲು ನಿಧಾನ ಶಾಂತನಾ ಎಂದು ಅಪರೋಕ್ಷ ಜ್ಞಾನವರೇಣ್ಯರಾದ ಶ್ರೀ ವ್ಯಾಸವಿಠಲರು ಶ್ರೀ ವಿಜಯದಾಸರು ಆತ್ಮಚರಿತ್ರೆಯ ರೂಪದಲ್ಲಿರುವ "ವಿಜಯ ಕವಚ" ದಲ್ಲಿ ಕೊಂಡಾಡಿದ ಶಾಂತಿದೂತರಾದ ಶ್ರೀವಿಜಯರಾಯರನ್ನು ಸ್ಮರಿಸಲು ನಮಗೂ ಅವರೆಲ್ಲರ ಭಕ್ತರಿಗೂ ಮನಃಶಾಂತಿಯನ್ನು ದೈಹಿಕ ಆರೋಗ್ಯವನ್ನು ನೀಡಿ ಆಧ್ಯಾತ್ಮ ಸಾಧನೆಯ ಮಾರ್ಗದೆಡೆಗೆಹೋಗಲು ಪ್ರೋತ್ಸಾಹ, ಹುಮ್ಮಸ್ಸು, ಚೇತನ, ಚಿಲುಮೆ ನೆಲುಮೆ ನಿರಂತರ ತೈಲಧಾರೆಯಂ ಏಕಾಂತ ಭಕ್ತಿಯನ್ನು ಪರಮಾತ್ಮನ ಅಡಿದಾವರೆಗಳಲ್ಲಿ ಗರಗಳಾದ ಶ್ರೀ ವಿಜಯದಾಸರು ದಯಪಾಲಿಸುತ್ತಾರೆ